


# ಅರಣ್ಯಗಳ ಸಂರಕ್ಷಣೆ ಮತ್ತು ಆ ನಿಟ್ಟಿನಲ್ಲಿ ಪ್ರಯತ್ನ ವೃದ್ಧಿಗೆ ಕ್ಯಾನೊಪಿಯೊಂದಿಗೆ ಕೈ ಜೋಡಿಸಿ ಫ್ಲಿಪ್‌ಕಾರ್ಟ್ ಹಾಗೂ ಮಿಂತ್ರಾ

** ಕ್ಯಾನೋಪಿ  ಪ್ಯಾಕ್4ಫುಡ್ (ಪ್ಯಾಕೇಜಿಂಗ್) ಮತ್ತು ಕ್ಯಾನೋಪಿಸ್ಟೈಲ್ (ಫ್ಯಾಷನ್) ಉಪಕ್ರಮಗಳಿಗೆ ಸಹಿ.*

** ತಮ್ಮ ಪ್ಯಾಕೇಜಿಂಗ್‌ನಲ್ಲಿ ಪುರಾತನ ಹಾಗೂ ಅಳಿವಿನಂಚಿನಲ್ಲಿರುವ ಕಾಡುಗಳಿಂದ ಪಡೆದಿರುವ ವಸ್ತುಗಳನ್ನು ಪಡೆಯಲು ಪೇಪರ್ ಅಥವಾ ಮಾನವ-ವ ಮಿರ್ಮಿತ ಸೆಲ್ಯುಲೋಸಿಕ್ ಫೈಬರ್ಗಳ ಬಳಕೆ*

**ಬೆಂಗಳೂರು/ವ್ಯಾಂಕೌರ್-ಜುಲೈ 22, 2021**- ಭಾರತದ ದೇಶೀಯ ಗ್ರಾಹಕರ ಇಂಟರ್ನೆಟ್ ಪರಿಸರ ಫ್ಲಿಪ್‌ಕಾರ್ಟ್ ಗ್ರೂಪ್, ದೇಶೀಯ ಇ-ಕಾಮರ್ಸ್ ಮಾರುಕಟ್ಟೆ ಪ್ರದೇಶ ಫ್ಲಿಪ್‌ಕಾರ್ಟ್ ಮತ್ತು ಭಾರತದ ಮುಂಚೂಣಿಯ ಫ್ಯಾಷನ್ ಮತ್ತು ಲೈಫ್‌ಸ್ಟೈಲ್ ತಾಣ ಮಿಂತ್ರಾ, ಇಂದು ತಮ್ಮ ವಸ್ತುಗಳ ಪ್ಯಾಕೇಜಿಂಗ್‌ಗಾಗಿ ಜವಬ್ದಾರಿಯುತ ಹೆಜ್ಜೆಯಿಡುವಲ್ಲಿ ಬದ್ಧತೆ ತೋರಿದ್ದು, ಮಾನವ ನಿರ್ಮಿತ ಸೆಲ್ಯುಲೋಸಿಕ್ ಫೈಬರ್ಗಳ ಬಳಕೆಗಾಗಿ ಪರಿಸರ ಕಾಳಜಿಯ ಸ್ವಯಂ ಸೇವಾ ಸಂಸ್ಥೆ ಕ್ಯಾನೋಪಿಯೊಂದಿಗೆ ಕೈಜೋಡಿಸಿವೆ.

ಫ್ಲಿಪ್‌ಕಾರ್ಟ್ ಹಾಗೂ ಮಿಂತ್ರಾ ಜಗತ್ತಿನ ಅರಣ್ಯಗಳಲ್ಲಿ ಹವಾಮಾನ ಸ್ಥಿರತೆ ಕಾಯ್ದುಕೊಳ್ಳುವುದು, ಜೀವವೈವಿಧ್ಯತೆಯನ್ನು ಕಾಪಾಡುವುದು ಮತ್ತು ದೇಶೀಯ ಸಮುದಾಯಗಳ ಹಕ್ಕುಗಳನ್ನು ಕಾಪಾಡುವುದರಲ್ಲಿ ತಮ್ಮ ಪಾತ್ರವನ್ನು ಅರಿತಿವೆ. ಕ್ಯಾನೋಪಿಯ ಪ್ಯಾಕ್4ಫುಡ್ ಹಾಗೂ ಕ್ಯಾನೋಪಿಸ್ಟೈಲ್‌ನೊಂದಿಗೆ ಕೈಜೋಡಿಸುವ ಮೂಲಕ ಸುಸ್ಥಿರ ವಸ್ತುಗಳನ್ನು ಸಂಗಹ ಮತ್ತು ಪ್ಯಾಕೇಜಿಂಗ್ ಕುರಿತು ಬದ್ಧತೆ ಪ್ರದರ್ಶಿಸಿವೆ. ಇತ್ತೀಚೆಗಷ್ಟೇ, ಈ ಕಂಪನಿಗಳು ತಮ್ಮ ವಸ್ತುಗಳ ಪ್ಯಾಕಿಂಗ್ ಹಾಗೂ ವಿತರಣೆಯಲ್ಲಿ ಏಕಬಳಕೆಯ ಪ್ಲಾಸ್ಟಿಕ್ ಅನ್ನು ನಿವಾರಿಸಿರುವುದಾಗಿ ಘೋಷಿಸಿದ್ದವು.ಬದಲಾಗಿಪರಿಸರ ಸ್ನೇಹಿ ಪೇಪರ್ ಕವರ್ಗಳು, ಶ್ರೆಡ್ಡೆಡ್ ವಸ್ತುಗಳು ಮತ್ತು 2 ಪ್ಲೈರೋಲ್‌ಗಳ ಬಳಕೆಗೆ ಒತ್ತು ನೀಡಿರುವುದಾಗಿ ತಿಳಿಸಿದ್ದವು.

ಈ ಒಪ್ಪಂದದ ಮೂಲಕ ಫ್ಲಿಪ್‌ಕಾರ್ಟ್ ಸಮೂಹದ ಎರಡು ಕಂಪನಿಗಳು ಅರಣ್ಯ ಮೂಲದ ಸುಸ್ಥಿರ ವಸ್ತುಗಳು ಮತ್ತು ಮುಂದಿನ ಪೀಳಿಗೆ ಕಚ್ಚಾ ವಸ್ತುಗಳಿಗಾಗಿ ಅರಣ್ಯದ ಮೊರೆ ಹೋಗದಂತೆ ಪರಿವರ್ತನೆ ತರುವ ನಿಟ್ಟಿನಲ್ಲಿ ಕೆಲಸ ಮಾಡಲಿವೆ.  ಈ ಬದ್ಧತೆಗಾಗಿ, ಮುಂದಿನ ಮೂರು ವರ್ಷಗಳಲಿ ಫ್ಲಿಪ್‌ಕಾರ್ಟ್ ಹಾಗೂ ಮಿಂತ್ರಾ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಿದೆ.

* ಬಬಲ್ ಪೇಪರ್ ಹಾಗೂ ಪೇಪರ್ ಬೋರ್ಡ್‌ಗಳ ಬಳಕೆ ಕಡಿಮೆಗೊಳಿಸಲು ಮರುಬಳಕೆ/ಮರುಭರ್ತಿ ಮಾಡಬಹುದಾದ ಮೂಲ ಅಥವಾ ವಿನ್ಯಾಸಗಳ ಆವಿಷ್ಕಾರ

* ಸಂಸ್ಕರಿಸಬಹುದಾದ, ಮರುಬಳಕೆ ಮಾಡಬಹುದಾದ ಮತ್ತು/ಅಥವಾ ಎಫ್‌ಎಸ್‌ಸಿ ಪ್ರಮಾಣೀಕೃತ ಕಾಗದಗಳ ಬಳಕೆಯನ್ನು ಪ್ರೋತ್ಸಾಹಿಸುವುದು ಮತ್ತು ಮಾನವ ನಿರ್ಮಿತ ಸೆಲ್ಯುಲೋಸಿಕ್ ಫೈಬರ್ ಇರುವ ವಸ್ತುಗಳನ್ನು ಬಳಸುವುದು.

* ಪ್ಯಾಕೇಜಿಂಗ್ ವಸ್ತುಗಳನ್ನು ಅತ್ಯಂತ ಕಡಿಮೆಗೊಳಿಸುವ ಇ-ಕಾಮರ್ಸ್, ರವಾನೆ, ಪ್ರದರ್ಶನ ಮತ್ತು ಕವರ್ ಮಾಡುವ ವ್ಯವಸ್ಥೆಯನ್ನು ವಿನ್ಯಾಸಗೊಳಿಸಿ, ಜಾರಿಗೊಳಿಸುವುದು.

* ಪ್ಯಾಕೇಜಿಂಗ್‌ನಲ್ಲಿ ಪುನರ್ ಬಳಕೆಯ ವಸ್ತುಗಳ ಬಳಕೆಯನ್ನು ಹೆಚ್ಚಿಸುವುದು.

* ಆಂತರಿಕ ಬ್ಯುಸಿನೆಸ್ ಅಳವಡಿಕೆಯಲ್ಲಿ ಮರುಬಳಕೆಯ ಪ್ಯಾಕೆಂಜಿಂಗ್ ವ್ಯವಸ್ಥೆ ಜಾರಿ.

* ಡಿಜಿಟಲ್ ಸಂವಹನ, ಮಾರುಕಟ್ಟೆ ಮತ್ತು ಲೆಕ್ಕಪತ್ರಗಳ ವ್ಯವಸ್ಥೆಗಳ ಬಳಕೆ ಹೆಚ್ಚಳ

* ಸಂಶೋಧನೆ ಮತ್ತು ಅವುಗಳನ್ನು ಉದ್ಭವಿಸುವ ಮತ್ತು ಸುತ್ತುವರಿಯುವ ಆರ್ಥಿಕ ಆವಿಷ್ಕಾರಗಳಿಗೆ ಅಳವಡಿಸುವುದು ಸೇರಿದಂತೆ ಉತ್ತಮ ಅಭ್ಯಾಸಗಳ ಅಳವಡಿಕೆ.

* ರೇಯನ್/ವಿಸ್ಕೋಸ್, ಲ್ಯೂಸೆಲ್ ಮತ್ತು ಮೋಡಲ್ ಸೇರಿದಂತೆ ಇತರ ಫೈಬರ್‌ಗಳ ಬದಲು ಮಾನವ-ನಿರ್ಮಿತ ಸೆಲ್ಯುಲೋಸಿಕ್ ಫೈಬರ್ ಬಳಕೆಯನ್ನು ಹೆಚ್ಚಿಸುವುದು.

**ಈ ಒಪ್ಪಂದದ ಕುರಿತು ಮಾತನಾಡಿದ ಕ್ಯಾನೋಪಿಯ ಕಾರ್ಯನಿರ್ವಾಹಕ ನಿರ್ದೇಶಕ ನಿಕೋಲೆ ರೈಕ್ರಾಫ್ಟ್,** "ಮುಂದಿನ ಪೀಳಿಗೆಯ ಪ್ಯಾಕೇಜಿಂಗ್ ಮತ್ತು ಉಡುಪುಗಳನ್ನು ತಯಾರಿಸುವಲ್ಲಿ ಭಾರತಕ್ಕೆ ಜಾಗತಿಕ ನಾಯಕನಾಗುವ ಕ್ಷಮತೆಯಿದೆ. ಫ್ಲಿಪ್‌ಕಾರ್ಟ್ ಹಾಗೂ ಮಿಂತ್ರಾದೊಂದಿಗಿನ ಈ ಪಾಲುದಾರಿಕೆ ಈ ಅರ್ಥಪೂರ್ಣ ಸಮಯದಲ್ಲಿ ಪರಿಸರ-ಸಂರಕ್ಷಣೆ ಪರಿಹಾರಗಳನ್ನು ಅಳವಡಿಸುವ ಪ್ರಯತ್ನಕ್ಕೆ ವೇಗ ನೀಡಲಿದೆ" ಎಂದರು.

**ಫ್ಲಿಪ್‌ಕಾರ್ಟ್‌ನ ಪೂರೈಕೆ ಸರಣಿಯ ಹಿರಿಯ ಉಪಾಧ್ಯಕ್ಷ ಹಾಗೂ ಮುಖ್ಯಸ್ಥ ಹೇಮಂತ್ ಬದ್ರಿ**, "ದೇಶೀಯ ಇ-ಕಾಮರ್ಸ್ ಮಾರುಕಟ್ಟೆ ಫ್ಲಿಪ್‌ಕಾರ್ಟ್, ವ್ಯವಹಾರಗಳಿಗೆ ಬದಲಿ ವ್ಯವಸ್ಥೆಗಳನ್ನು ಕಲ್ಪಿಸುವ ಮೂಲಕ ಸುಸ್ಥಿರ ಪರಿಸರ ನಿರ್ಮಿಸಲು ಬದ್ಧವಾಗಿದೆ. ಈ ಹೆಜ್ಜೆಯಲ್ಲಿ, ನಾವು ಕ್ಯಾನೋಪಿಸ್ಸ್ಟೈಲ್ ಮತ್ತು ಪ್ಯಾಕ್4ಫುಡ್‌ನೊಂದಿಗೆ ಕೈಜೋಡಿಸಿರುವುದು ಸಂತಸ ತಂದಿದೆ. ಈ ಉಪಕ್ರಮಗಳನ್ನು ನಾವು ಹಲವು ಉಪಯುಕ್ತ ಯೋಜನೆಗಳನ್ನು ಜಾರಿಗೊಳಿಸುವ ನಿರೀಕ್ಷೆ ಹೊಂದಿದ್ದೇವೆ" ಎಂದು ಹೇಳಿದರು.

ಮಿಂತ್ರಾದ ಉಪಾಧ್ಯಕ್ಷ ಮತ್ತು ಮೂಲಸಂಗ್ರಹದ ಮುಖ್ಯಸ್ಥ ನೀತು ಜೋತ್ವಾನಿ, "ತನ್ನ ಸಂಪೂರ್ಣ ಪೂರೈಕೆ ಸರಣಿ ಹಾಗೂ ಉತ್ಪಾದನಾ ಪ್ರಕ್ರಿಯೆಯಲ್ಲಿ ಮರುಬಳಕೆಯನ್ನು ಪ್ರೋತ್ಸಾಹಿಸುವ ಮೂಲಕ ಮಿಂತ್ರಾ ಪರಿಸರದಲ್ಲಿ ಇಂಗಾಲದ ಪ್ರಮಾಣ ಕಡಿಮೆಗೊಳಿಸಲು ಬದ್ಧವಾಗಿದೆ. ಕ್ಯಾನೋಪಿಯೊಂದಿಗೆ ಈ ಸಹಯೋಗ ಏಕಬಳಕೆಯ ಪ್ಲಾಸ್ಟಿಕ್ ಅನ್ನು ಸಂಪೂರ್ಣವಾಗಿ ನಿವಾರಿಸುವ ಹಾಗೂ ಪರಿಸರ ಸ್ನೇಹಿ ಅಭ್ಯಾಸಗಳನ್ನು ಅಳವಡಿಸಕೊಳ್ಳಲು ನೆರವಾಗಲಿದೆ ಎಂದು ಆಶಿಸುತ್ತೇನೆ" ಎಂದರು.

**Media Contacts:**

**Canopy Contact**
Mike Hudema
+1 778-989-6153
communications@canopyplanet.org

**Flipkart Contact**
Media@flipkart.com

**About Canopy**

Canopy is a not-for-profit environmental organization dedicated to protecting forests, species, and climate. Canopy has collaborated with more than 750 companies to develop cutting-edge environmental policies that transform unsustainable supply chains, spark innovative solutions, and protect our world's remaining Ancient and Endangered Forests. Learn more at: www.canopyplanet.org

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, Flipkart Wholesale, and Cleartrip. The Group is also a majority shareholder in PhonePe, one of the leading Payments Apps in India. Started in 2007, Flipkart has enabled millions of consumers, sellers, merchants, and small businesses to be a part of India's digital commerce revolution, with a registered customer base of more than 350 million, offering over 150 million products across 80+ categories. Our efforts to democratize commerce in India, drive access and affordability, delight customers, create lakhs of jobs in the ecosystem, and empower generations of entrepreneurs and MSMEs have inspired us to innovate on many industry firsts. Flipkart is known for pioneering services such as Cash on Delivery, No Cost EMI and easy returns – customer-centric innovations have made online shopping more accessible and affordable for millions of Indians. Together with its group companies, Flipkart is committed to transforming commerce in India through technology.